# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡವಳಿಗಳು

| ವಾದಿಗಳು: | ಪ್ರತಿವಾದಿಗಳು: |
| --- | --- |
| 1)ಶ್ರೀಮತಿ ಲಕ್ಷ್ಮಿ ಗಂಡ ಮಾಸನೂರು ಮಲ್ಲಿಕಾರ್ಜುನ<br>2)ಶ್ರೀಮತಿ ಶಾಂತಮ್ಮ ಗಂಡ ತಿಮ್ಮಪ್ಪ ಗೋಟೂರು | ಕಂದಾಯ ಪರಿವೀಕ್ಷಕರು, ಮೋಕಾ |

**ವಿಷಯ:**–ಬಳ್ಳಾರಿ ತಾಲೂಕು ಮೋಕಾ ಹೋಬಳಿಯ ಗೋಟೂರು ಗ್ರಾಮದ ಸರ್ವೆ ನಂ:23/5 ವಿಸ್ತೀರ್ಣ:1.00 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಿಚಾರಣೆ ಕುರಿತು

*******

**ಪ್ರಾಸ್ತವನೆ:**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಮೋಕಾ ಹೋಬಳಿಯ ಗೋಟೂರು ಗ್ರಾಮದ ಸರ್ವೆ ನಂ:23/5 ವಿಸ್ತೀರ್ಣ:1.00 ಎಕರೆ ಜಮೀನಿಗೆ ಹಾಲಿ ಭೂಮಾಲಿಕಾರದ ಶ್ರೀಮತಿ ಲಕ್ಷ್ಮಿ ಗಂಡ ಮಾಸನೂರು ಮಲ್ಲಿಕಾರ್ಜುನ ಇವರು ಉಪನೊದಣೆ ಅಧಿಕಾರಿಗಳು, ಬಳ್ಳಾರಿ ಇವರ ಕ್ರಯ ಪತ್ರ ಸಂಖ್ಯೆ: BLY-1-04335/2010-11 ರ ದಿನಾಂಕ: 07–07–2010ರ ಪ್ರಕಾರ ಶ್ರೀಮತಿ ಶಾಂತಮ್ಮ ಗಂಡ ತಿಮ್ಮಪ್ಪ ಇವರಿಗೆ ಖರೀದಿಗೆ ಮರಾಟ ಮಾಡಿರುತ್ತಾರೆ. ಅದರಂತೆ ಖರೀದಿದಾರರು ಹಕ್ಕು ಬದಲಾವಣೆ ಮಾಡಲು ಮನವಿ ಸಲ್ಲಿಸಿರುತ್ತಾರೆ. ಅರ್ಜಿದಾರರ ಮನವಿಯಂತೆ ಕಂದಾಯ ಪರಿವೀಕ್ಷಕರು, ಬಳ್ಳಾರಿ ಇವರು ಗ್ರಾಮದಲ್ಲಿ ನಮೂನೆ–21 ಜಾರಿ ಮಾಡಲಾಗಿರುತ್ತದೆ. ನಿಗದಿ ಅವದಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ. ಆದರೆ ಡಾ॥ಬಿ.ಆರ್ ಅಂಬೇಂಡ್ಕರ್ ಅಭಿವೃದ್ಧಿ ನಿಗಮ ನಿಯಮಿತದಿಂದ ಜಮೀನು ಪಡೆದಿರುವುದಾಗಿ ಕಂಡು ಬಂದಿರುತ್ತದೆ. ಕಾರಣ ಸದ್ರಿ ಹಕ್ಕು ಬದಲಾವಣೆ ಕಡತವನ್ನು ತಿರಸ್ಕರಿಸಿ ಇತ್ಯರ್ಥ ಪಡಿಸಲು ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ಇತ್ಯರ್ಥ ಪಡಿಸಲು ದಿನಾಂಕ:06–06–2016 ಮತ್ತು 18–07–2016ರಂದು ವಿಚಾರಣೆಗೆ ಕರೆಯಲಾಗಿ ಕ್ರಯದಾರರು ಪ್ರಕರಣಕ್ಕೆ ಹಾಜರಾಗಿ ಡಾ॥ಬಿ.ಆರ್ ಅಂಬೇಂಡ್ಕರ್ ಅಭಿವೃದ್ಧಿ ನಿಗಮ, ಬಳ್ಳಾರಿ ಇವರಿಂದ ದಿನಾಂಕ:18–02–2009ರಂದು ಶ್ರೀಮತಿ ಲಕ್ಷ್ಮಿ ಗಂಡ ಮಾಸನೂರು ಮಲ್ಲಿಕಾರ್ಜುನ ಇವರ ಹೆಸರಿಗೆ ಮಂಜೂರು ಮಾಡಿರುತ್ತಾರೆ. ಸದ್ರಿ ಜಮೀನು ಖರೀದಿಸಲು ರೂ40,000/– ಸಾಲ ಮಂಜೂರಾಗಿದ್ದು ಸಾಲವು ಸಂಪೂರ್ಣ ಮನ್ನಾ ಹಾಗಿರುತ್ತದೆ. ಕಾರಣ ಈ ಕೆಳಗಿನಂತೆ ಆದೇಶ.

–::ಆದೇಶ::–

**ಸಂ/ಕಂ/ವಿವಾದ/07/2016–17** **ದಿನಾಂಕ:18/07/2016**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ಮೋಕಾ ಹೋಬಳಿಯ ಗೋಟೂರು ಗ್ರಾಮದ ಸರ್ವೆ ನಂ:23/5 ವಿಸ್ತೀರ್ಣ:1.00 ಎಕರೆ ಜಮೀನು ಉಪನೊದಣೆ ಅಧಿಕಾರಿಗಳು, ಬಳ್ಳಾರಿ ಇವರ ಕ್ರಯ ಪತ್ರ ಸಂಖ್ಯೆ: BLY-1-04335/2010-11 ರ ದಿನಾಂಕ: 07–07–2010ರ ಪ್ರಕಾರ **ಶ್ರೀಮತಿ ಶಾಂತಮ್ಮ ಗಂಡ ತಿಮ್ಮಪ್ಪ** ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ: 18.7.16 ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

18/7/16

ತಹಶೀಲ್ದಾರರು
ಬಳ್ಳಾರಿ.

<u>ಪ್ರತಿಯನ್ನು:</u>

1.ವಾದಿಗಳು

2.ಶಿರಸ್ತೇದಾರರು ಭೂಮಿ ಗಣಿಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.

3.ಆದೇಶದ ಕಡತಕ್ಕೆ.